# ಪುರುಷರನ್ನೂ ಸೆಳೆವ ಪ್ಲಾಟಿನಂ

ಪ್ಲಾಟಿನಂ ಆಭರಣಗಳ ವಿನ್ಯಾಸ ವಿಭಿನ್ನ. ಯುವಕ ಯುವತಿಯರನ್ನು ಹೆಚ್ಚಾಗಿ ಸೆಳೆಯುವ ಈ ಬಿಳಿ ಲೋಹ ಕೈಗೆಟಕುವ ಬೆಲೆಯಲ್ಲಿ ಲಭ್ಯ. ಪ್ಲಾಟಿನಂ ಉಂಗುರ, ಬ್ರೇಸ್‌ಲೆಟ್, ಚೈನ್ ಧರಿಸುವುದು ಇಂದಿನ ಯುವಕರ ಹೊಸ ಟ್ರೆಂಡ್.

★ ಅವನೀಶ್

★ ಚಿತ್ರಗಳು: ಬಿ.ಎಚ್. ಶಿವಕುಮಾರ್



ಪ್ಲಾಟಿನಂ ಆಭರಣಗಳ ವಿನ್ಯಾಸ ವಿಭಿನ್ನ. ಯುವಕ ಯುವತಿಯರನ್ನು ಹೆಚ್ಚಾಗಿ ಸೆಳೆಯುವ ಈ ಬಿಳಿ ಲೋಹದಿಂದ ಮಾಡಿದ ಉಂಗುರ, ಬ್ರೇಸ್‌ಲೆಟ್, ಚೈನ್ ಧರಿಸುವುದು ಇಂದಿನ ಯುವಕರ ಹೊಸ ಟ್ರೆಂಡ್.

ಇದೀಗ ಯುವಕ–ಯುವತಿಯರ ಅದರಲ್ಲೂ 20ರಿಂದ 35 ವರ್ಷದೊಳಗಿನ ಯುವಜನರ ಮೆಚ್ಚು ಪ್ಲಾಟಿನಂ ಆಭರಣವೇ ಆಗಿದೆ. ಪ್ಲಾಟಿನಂ ಕಾಲ ಕಳೆದಂತೆ ಕಳೆಗುಂದುವುದಿಲ್ಲ, ಸವೆಯುವುದಿಲ್ಲ. ಅತ್ಯಂತ ಅಮೂಲ್ಯ ಮತ್ತು ಮೌಲಿಕ ಲೋಹವಿದು.

ಪ್ಲಾಟಿನಂ ಸರಳ, ಶುದ್ಧ ಮತ್ತು ಭಾವನಾತ್ಮಕ ಸಂಬಂಧ ಬೆಸೆಯುವ ಲೋಹ. ಸಹಜವಾಗಿ ಬಿಳಿ ಬಣ್ಣದಲ್ಲಿರುವ ಈ ಆಭರಣ ಯುವಕರಿಗೆ ಚೆನ್ನಾಗಿ ಒಪ್ಪುತ್ತದೆ. ಅಲ್ಲದೆ ಇದು ಭಾವ ಸೂಕ್ಷ್ಮತೆಗೆ ಹೆಸರಾಗಿದೆ. ಇದರ ದೀರ್ಘಕಾಲದ ಬಾಳಿಕೆ ಮತ್ತು ಬದಲಾಗದ ಗುಣಮಟ್ಟದಿಂದಾಗಿ ಇದನ್ನು ಜೀವಿತ ಕಾಲದವರೆಗೂ ಧರಿಸಬಹುದು. ಇದೇ ಪ್ಲಾಟಿನಂ ಆಭರಣದ ವಿಶೇಷ.

ಬೆಂಗಳೂರಿನಲ್ಲಿ ಪ್ಲಾಟಿನಂ ಆಭರಣಕ್ಕೆ ಬೇಡಿಕೆ ಹೆಚ್ಚುತ್ತಿದೆ. ಆಧುನಿಕ ಮನೋಭಾವದ ಯುವಕ–ಯುವತಿಯರು, ನಿಶ್ಚಿತಾರ್ಥಕ್ಕೆ ಸಿದ್ಧರಾದ ಹುಡುಗ ಹುಡುಗಿಯರು ಪ್ಲಾಟಿನಂಗೇ ಮೊರೆ ಹೋಗಿದ್ದಾರೆ. ಪ್ರೇಮಿಗಳ ದಿನ, ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ ಮುಂತಾದ ಸಂದರ್ಭದಲ್ಲಿ ಉಡುಗೊರೆಯಾಗಿ ನೀಡಲು ಈಗ ಹೆಚ್ಚಾಗಿ ಇದನ್ನೇ ಇಷ್ಟಪಡುತ್ತಿದ್ದಾರೆ.

ಪ್ಲಾಟಿನಂ ರಿಂಗ್‌ನ ಬೆಲೆ 10 ಸಾವಿರದಿಂದ 25 ಸಾವಿರ ರೂಪಾಯಿವರೆಗೆ ಇದ್ದರೆ ಬ್ರೇಸ್‌ಲೆಟ್ ಬೆಲೆ ಒಂದೂವರೆ ಲಕ್ಷ ರೂಪಾಯಿವರೆಗೂ ಇದೆ.




'ಬೆಂಗಳೂರಿನ 'ಆಭರಣ ಜ್ಯುವೆಲ್ಲರ್' ಇದೀಗ ಪ್ಲಾಟಿನಂನಲ್ಲಿ ಹಲವು ವೈಶಿಷ್ಟ್ಯಗಳಿರುವ ಹೊಸ ವಿನ್ಯಾಸದ ಒಡವೆಯನ್ನು ಹೊರತಂದಿದ್ದು, ಈ ಡಿಸೈನ್ ಟ್ರೆಂಡ್ ಹೀಗೆಯೇ ಮುಂದುವರಿಯಲಿದೆ, ಮುಂಬರುವ ದಿನಗಳಲ್ಲಿ ಈ ಲೋಹ ಮತ್ತಷ್ಟು ಜನಪ್ರಿಯವಾಗಲಿದೆ' ಎನ್ನುತ್ತಾರೆ ಈ ಜ್ಯುವೆಲ್ಲರಿಯ ವ್ಯವಸ್ಥಾಪಕ ನಿರ್ದೇಶಕ ಪ್ರತಾಪ್ ಕಾಮತ್.

ಅಂದ ಹಾಗೆ ಆಭರಣ ಜ್ಯುವೆಲ್ಲರಿ ಹೊರತಂದಿರುವ ಪ್ಲಾಟಿನಂ ಆಭರಣವನ್ನು ಅನಾವರಣಗೊಳಿಸಲು ಬಾಲಿವುಡ್ ನಟ ಇರ್ಫಾನ್ ಖಾನ್ ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದರು.

'ಪ್ಲಾಟಿನಂ ಆಭರಣ ನನ್ನನ್ನು ಸೆಳೆದದ್ದು ಸುಮಾರು ಆರೇಳು ವರ್ಷಗಳ ಹಿಂದೆ. ಇದು ಒಂದು ರೀತಿಯ 'ಪ್ಲೆಸೆಂಟ್ ಲುಕ್' ಕೊಡುತ್ತದೆ. ಬ್ರೇಸ್‌ಲೆಟ್ ರಿಂಗ್, ಚೈನ್, ಕಫ್ಲಿಂಗ್ಸ್ ಎಲ್ಲವೂ ನನಗಿಷ್ಟ' ಎನ್ನುತ್ತಾರೆ ಈ ನಟ.

## ಆಮದು ಮಾಡಿಕೊಂಡ ಆಭರಣ

ಭಾರತದಲ್ಲಿ ಪ್ಲಾಟಿನಂ ನಿಕ್ಷೇಪಗಳಿಲ್ಲ. ಈ ಲೋಹದ ಗಣಿ ದಕ್ಷಿಣ ಆಫ್ರಿಕಾ ಮತ್ತು ರಷ್ಯಾಗಳಲ್ಲಿವೆ. ಆದರೆ ಭಾರತದಲ್ಲಿ ಮುಂಬಯಿ, ಉದಯಪುರ, ಚೆನ್ನೈಗಳಲ್ಲಿ ಕೈಕುಸುರಿಯಿಂದ ಪ್ಲಾಟಿನಂ ಆಭರಣ ಮಾಡಿಕೊಡುವ ಕುಶಲ ಕರ್ಮಿಗಳಿದ್ದಾರೆ. ನಮ್ಮ ದೇಶದ ಸುಮಾರು 800 ಕ್ಕೂ ಹೆಚ್ಚು ಆಭರಣ ಮಳಿಗೆಗಳಲ್ಲಿ ಪ್ಲಾಟಿನಂನ ವಿವಿಧ ವಿನ್ಯಾಸಗಳ ಒಡವೆಗಳು ಲಭ್ಯ.

ವರ್ಷಕ್ಕೆ ಸುಮಾರು ಇನ್ನೂರು ಟನ್ ಪ್ಲಾಟಿನಂ ಆಭರಣ ಉತ್ಪಾದನೆಯಾದರೆ ಚಿನ್ನ ಅಂದಾಜು 3000 ಟನ್ ಉತ್ಪಾದನೆಯಾಗುತ್ತದೆ. ಪ್ಲಾಟಿನಂ ಆಭರಣಗಳಲ್ಲಿ ಬರುವ ಡಿಸೈನ್‌ಗಳು ಬಹಳ ಅಪೂರ್ವವಾದದ್ದು. ಇವು ಯಾವುದೇ ಅನುಕರಣೆಯಿಂದ ಮಾಡಿದಂಥವು ಅಲ್ಲ ಎಂಬುದು ಗಮನಾರ್ಹ.

ಸಾಮಾನ್ಯವಾಗಿ ಎಲ್ಲ ಪ್ಲಾಟಿನಂ ಆಭರಣದ ಮೇಲೆ 'ಪಿಟಿ 950' ಎಂಬ ಮಾರ್ಕ್ ಇರುತ್ತದೆ. ಇದು ಆಭರಣದ ಹಾಲ್‌ಮಾರ್ಕ್ ಎಂದು ಅರ್ಥ. ಜತೆಗೆ ಗುಣಮಟ್ಟ ಮತ್ತು ಪರಿಶುದ್ಧತೆಯ ಸಂಕೇತವೂ ಆಗಿದೆ.